ಮಗಳನ್ನು ಮಾತನಾಡಿಸುವಾಗ ಅಪ್ಪನ ಮುಖದ ಗೆರೆಗಳು ವ್ಯತ್ಯಾಸವಾಗಿದ್ದವು. ಹೀಗೆ ಧುಮುಧುಮು ಎಂದು ಅವರೆಂದೂ ಬಂದವರಲ್ಲ. ಬಂದರೂ ಅಳಿಯನ ಬಗ್ಗೆ ಇಷ್ಟೊಂದು ವಿಚಾರಣೆ ನಡೆಸಿದವರಲ್ಲ. ಯಾರು ಕಿವಿ ಚುಚ್ಚಿದರೋ ಏನೋ? 'ಎಲ್ಲಿ ಹೋಗ್ತಾನೆ, ಏನು ಮಾಡ್ತಾನೆ, ಚೆನ್ನಾಗಿ ನೋಡ್ಕೋತಾನಾ, ಮನೆಗೆ ಕಾಲಕಾಲಕ್ಕೆ ದಿನಸಿ ತಂದು ಹಾಕ್ತಾನಾ, ಬೇರೆ ಏನಾದರೂ ಚಟಗಳು...' ಅಪ್ಪನ ಪ್ರಶ್ನೆಪತ್ರಿಕೆಗೆ ಉತ್ತರಿಸುವಷ್ಟರಲ್ಲಿ ಮಗಳಿಗೆ ಸಾಕುಸಾಕಾಗಿತ್ತು. ಕೊನೆಗೆ ಬೇಸತ್ತು, 'ವಿಚಾರಣೆಯನ್ನೆಲ್ಲ ನಿಮ್ಮ ಅಳಿಯಂದಿರ ಬಳಿಯೇ ನಡೆಸಿ' ಎಂದು ಅಡುಗೆಕೋಣೆ ಸೇರಿಕೊಂಡಿದ್ದಳು.

ಮಧ್ಯಾಹ್ನ ಉಂಡದ್ದಾಯಿತು. ಸಂಜೆಯ ಕಾಫಿಯೂ ಆಯಿತು. ಕೊನೆಯ ಬಸ್ಸಿಗೆ ಅಪ್ಪ ಹೊರಟು ನಿಂತಾಗ ಮಗಳ ಮುಖದ ಗೆರೆಗಳು ಸಡಿಲಗೊಂಡವು. ಪಂಚೆ ಸರಿಪಡಿಸಿಕೊಳ್ಳುತ್ತಾ ಎದ್ದು ನಿಂತ ಅಪ್ಪ ಏನನ್ನೋ ನೆನಪಿಸಿಕೊಂಡವರಂತೆ – 'ಮಗಳೇ, ನಿನ್ನ ಅಮ್ಮನ ಕಾಸಿನಸರ ತಗೊಂಡು ಬಂದಿದ್ದೆಯಲ್ಲ. ಅದನ್ನು ಸ್ವಲ್ಪ ಕೊಡ್ತೀಯ. ಮುಂದಿನ ವಾರ ಯಾವುದೋ ಮದುವೆಗೆ ಹೋಗೋದಿತ್ತು' ಎಂದರು. ಎದೆ ಧಸಕ್ಕೆಂದಿತು. ಅಪ್ಪನ ಅನಿರೀಕ್ಷಿತ ಆಗಮನದ ಉದ್ದೇಶ ಮಗಳಿಗೆ ಅರ್ಥವಾಗಿತ್ತು .

ಕೊಡು ಎಂದು ಅಪ್ಪ ಕೇಳಿದ ಕಾಸಿನ ಸರವನ್ನು ಕೊಡುವುದಾದರೂ ಹೇಗೆ? ಸರ ಶೆಟ್ಟಿಯ ಪೆಠಾರಿ ಸೇರಿ ತಿಂಗಳಾಗಿತ್ತು. ಅಪ್ಪನಿಗೆ ಈ ವಿಷಯ ಗೊತ್ತಾಯಿತೆ?

'ಹೊತ್ತಾಯಿತಮ್ಮ' ಎನ್ನುವ ಅಪ್ಪನ ಮಾತು ಕೋಣೆಯೊಳಗೆ ಹಣೆಗೆ ಕೈಹಚ್ಚಿ ಕೂತವಳನ್ನು ಎಚ್ಚರಿಸಿತು. 'ಟ್ರಂಕಿನ ಬೀಗ ಹುಡುಕ್ತಾ ಇದೀನಪ್ಪ... ಸ್ವಲ್ಪ ತಾಳು' ಎಂದಳು. ಅಪ್ಪ ಮತ್ತೂ ಅವಸರಿಸಿದಾಗ ಮಗಳು ಹೊರಗೆ ಬಂದಳು.

'ಅಪ್ಪಾ, ಯಡವಟ್ಟಾಗಿದೆ. ಕಾಸಿನಸರವನ್ನು ಟ್ರಂಕಲ್ಲಿಟ್ಟಿದ್ದೆ. ಟ್ರಂಕಿನ ಬೀಗವನ್ನು ಅವರು ಮರೆತು ಜೇಬಲ್ಲಿಟ್ಟುಕೊಂಡು ಹೋಗಿದಾರೆ. ಈಗ ಏನು ಮಾಡೋದು?'

ಪ್ರಶ್ನೆ ಕೇಳಿದ ಮಗಳೇ ಉತ್ತರವನ್ನೂ ಹೇಳಿದಳು: 'ಒಂದು ಕೆಲಸ ಮಾಡಿ. ಈಗ ನೀವು ಹೋಗ್ಬಿಟ್ಟುಬನ್ನಿ. ಅವರು ಬಂದ ಮೇಲೆ ಅವರ ಹತ್ತಿರವೇ ಕಾಸಿನ ಸರ ಕಳಿಸ್ತೀನಿ, ಆಯ್ತಾ?'

ಮಗಳ ಮನಸ್ಸು ಓದಿದವರಂತೆ 'ಸರಿ ತಾಯಿ' ಎಂದರು ಅಪ್ಪ .

ಮಗಳ ಮನೆಗೆ ಅಪ್ಪ ಬಂದುಹೋದ ಮಾರನೇ ಸಂಜೆಯೇ ಅಳಿಯ ಮಾವನ ಮನೆಯಲ್ಲಿದ್ದ. ಅಂಗಳದಲ್ಲಿ ಕೂತ ಮಾವ ಮತ್ತು ಅಳಿಯ ತಾಂಬೂಲದೊಂದಿಗೆ ದೇಶಕೋಶಗಳನ್ನು ಮೆಲ್ಲುತ್ತಿದ್ದರು. ಒಳಮನೆಯಲ್ಲಿ ಅತ್ತೆ ಕಾಸಿನಸರವನ್ನು ಪೆಠಾರಿಯಲ್ಲಿಟ್ಟು ಬೀಗಹಾಕುತ್ತಿದ್ದರು".

ಕಾಸಿನಸರದ ಈ ಕಥೆ ಅಮ್ಮನ ಆತ್ಮಘನತೆಯ ಅಪೂರ್ವ ಉದಾಹರಣೆಯಂತೆ ಯಾವಾಗಲೂ ನೆನಪಾಗುತ್ತಿರುತ್ತದೆ. ಸ್ವಾಭಿಮಾನದ ಬದುಕಿಗಾಗಿ ಜೀವಮಾನವನ್ನು ತೇಯುವ ಅಮ್ಮನಂಥವರಿಗಷ್ಟೇ ಟ್ರಂಕಿಗೆ ಬೀಗ ಹಾಕಿ ಅಪ್ಪನನ್ನು ಸಾಗಹಾಕುವ ಐಡಿಯಾ ಬರಲು ಸಾಧ್ಯವೇನೋ? ಅಮ್ಮ–ಅಪ್ಪನ ಗೌರವವನ್ನು ಕಾದ ಆ ಟ್ರಂಕಿಗೆ ನಮಸ್ಕಾರಗಳು.

ಟ್ರಂಕೆಂದ ಕೂಡಲೇ ನೆನಪಿಗೆ ಬರುವುದು ಅಮ್ಮನಂಥವರ ಹೃದಯಕ್ಕೆ ತಟ್ಟುವ ಕಥೆಗಳೇ. 'ತೊಟ್ಟಿಲ ಹೊತ್ಕೊಂಡು / ತವರ ಬಣ್ಣ ಉಟ್ಕೊಂಡು / ಅಪ್ಪ ಕೊಟ್ಟೆಮ್ಮೆ ಹೊಡಕೊಂಡು' ಎನ್ನುವ ತವರೂರ ತಿಟ್ಟತ್ತಿ ತಿರುಗಿ ನೋಡುವ ಹೆಣ್ಣುಮಗಳ ಚಿತ್ರಣ ನೆನಪಿಸಿಕೊಳ್ಳಿ. ಅದರಲ್ಲಿ ಏನೋ ಒಂದು ಕೊರತೆ ಇರುವಂತಿದೆ. ತೊಟ್ಟಿಲು, ಹೊಸ ಸೀರೆ, ತೊಟ್ಟಿಲ ಸಿರಿಗಾಗಿ ಕರೆಯುವ ಎಮ್ಮೆ – ಎಲ್ಲವೂ ಸರಿಯೇ... ಆದರೆ ಮಗುವಿಗಾಗಿ ಒಂದಿಷ್ಟು ಆಟಿಕೆಗಳು, ಕಿವಿಗೆಂದೋ